ಶ್ರೀ ಹೆಚ್.ಎಂ. ರೇವಣ್ಣ : ಈ ವಿಷಯದಲ್ಲಿ ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ಏನಾದರೂ ತಪ್ಪಿದ್ದು ಅವರೇ ನನಗೆ ಏನಾದರೂ ಮಾಹಿತಿ ಕೊಟ್ಟಿದ್ದೇ ಆದರೆ ಆ ಇಲಾಖೆಯಲ್ಲಿರತಕ್ಕ ಅಧಿಕಾರಿಗಳನ್ನು ರಕ್ಷಣೆ ಮಾಡಬೇಕೆಂಬ ಇಚ್ಛೆ ನನಗೆ ಇಲ್ಲ. ನಾನು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಇದ್ದಂಥ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆಯೇ ಹೊರತು, ಆ ದೂರಿನ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಅಂಥದ್ದು ಇದ್ದರೆ ಕೂಡಲೇ ಕ್ರಮ ಕೈಗೊಳ್ಳುತ್ತೇನೆ. ಯಾರಿನ್ನೂ ರಕ್ಷಣೆ ಮಾಡುವುದಿಲ್ಲ ಮತ್ತು ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಹಿಂಜರಿಯುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಅಲ್ಲಿ ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳುವುದಕ್ಕೆ ವೆಂಟೆಡ್ ಡ್ಯಾಂ ಕಟ್ಟುತ್ತಿದ್ದೀರಿ. ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳುವುದಕ್ಕೆ ಹಲಗ ಹಾಕದಿದ್ದರೆ ಅಲ್ಲಿ ನೀರು ಶೇಖರಣೆ ಆಗುವುದಿಲ್ಲ. ಇದನ್ನು ಚಿಂತನೆ ಮಾಡಿ. ಏಕೆಂದರೆ ಇಲಾಖೆಯಿಂದ ಯಾವುದೇ ಒಂದು ಕಾರ್ಯಕ್ರಮ ಕೊಡುತ್ತೀರಿ. ಅದು ಅನುಷ್ಠಾನ ಆಗತಕ್ಕದ್ದೆಂದು ತಾವು ತಮ್ಮ ವ್ಯವಸ್ಥೆಯನ್ನು ಒಪ್ಪಿಕೊಂಡರೆ ರೈತರ ಟೀಕೆಗೆ ನಾವು ಗುರಿಯಾಗುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ : ಪ್ರತಾಪಚಂದ್ರ ಶೆಟ್ಟರು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಖುದ್ದಾಗಿ ಅಧಿಕಾರಿಗಳನ್ನು ಕರೆಯಿಸಿ ಚರ್ಚೆ ಮಾಡಿ ಸರಿಪಡಿಸುವ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : 6, 19, 722ನೇ ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಟಿ. ನರಸೀಪುರ ಟಿ.ಎ.ಪಿ.ಸಿ.ಎಂ.ಎಸ್‌ನ ಹಣ ದುರುಪಯೋಗ

152-ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಜಿಲ್ಲೆ ಟಿ. ನರಸೀಪುರ ಟಿ.ಎ.ಪಿ.ಸಿ.ಎಂ.ಎಸ್. ನಲ್ಲಿ ಇತ್ತೀಚೆಗೆ ದುರುಪಯೋಗವಾಗಿರುವ ಹಣ ಎಷ್ಟು?

ಆ) ಆಡಳಿತ ಮಂಡಳಿಯವರು ಇದಕ್ಕೆ ನೇರ ಜವಾಬ್ದಾರರಾಗಿರುವುದರಿಂದ ಮಂಡಳಿಯನ್ನು ರದ್ದು ಮಾಡುವುದರ ಜೊತೆಗೆ ಅವರುಗಳ ಮೇಲೆ ಶಿಸ್ತಿನ ಕ್ರಮ ಏಕೆ ತೆಗೆದುಕೊಳ್ಳಬಾರದು?

ಇ) ಕ್ಯಾಷ್ ಬ್ಯಾಲೆನ್ಸ್ ಕಡಿಮೆ ಮಾಡಲು ಮಂಡಳಿಯವರು ಏನಾದರೂ ಅಕ್ರಮ ಎಸಗಿದ್ದಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಮೈಸೂರು ಜಿಲ್ಲೆ ಟಿ. ನರಸೀಪುರ ಟಿ.ಎ.ಪಿ.ಸಿ.ಎಂ.ಎಸ್. ನಿಯಮಿತ ಇದರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 65ರ ಅನುಸಾರ ಪರಿವೀಕ್ಷಣೆ ಮಾಡಲಾಗಿದ್ದು ಸದರಿ ಪರಿವೀಕ್ಷಣಾ ವರದಿಯನ್ವಯ ಸಂಘದಲ್ಲಿ ಯಾವುದೇ ಹಣ ದುರುಪಯೋಗವಾಗಿರುವುದು ಕಂಡು ಬರುವುದಿಲ್ಲ. ಆದರೆ ಆಡಳಿತ ಮಂಡಳಿ ಸದಸ್ಯರುಗಳಿಂದ ಅನುತ್ಪಾದಕ ಮತ್ತು ಅನಾವಶ್ಯಕ ಖರ್ಚುಗಳಾಗಿದ್ದು ಅದರ ಬಾಬ್ತು ರೂ. 2,05,360-59 ಗಳ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು.

ಆ) ಕ್ರಮ ಪರಿಶೀಲನೆಯಲ್ಲಿದೆ.

ಇ) ನಗದು ಶಿಲ್ಕನ್ನು ಕಡಿಮೆ ಮಾಡಲು ನಡೆಸಿದ ಅನೇಕ ವ್ಯವಹಾರಗಳಿಗೆ ಆಡಳಿತ ಮಂಡಳಿ ಘಟನೋತ್ತರ ಅನುಮತಿ ನೀಡಿದೆ.